**ಕರ್ನಾಟಕ ಮಾಹಿತಿ ಆಯೋಗದಲ್ಲಿ ದಿ: 26-05 -2016 ರಂದು ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.**

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀ ಡಿ.ಎನ್. ನರಸಿಂಹರಾಜು, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.
2. ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮಾಹಿತಿ ಆಯುಕ್ತರು .
3. ಶ್ರೀ ಶಂಕರ್ ಆರ್ ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು.
4. ಶ್ರೀ ಎನ್.ಪಿ. ರಮೇಶ್, ರಾಜ್ಯ ಮಾಹಿತಿ ಆಯುಕ್ತರು.
5. ಶ್ರೀ ಕೆ.ಎಂ. ಚಂದ್ರೇಗೌಡ, ರಾಜ್ಯ ಮಾಹಿತಿ ಆಯುಕ್ತರು.
6. ಶ್ರೀ ಪಿ.ಜೆ. ವಿಜಯ ಕುಮಾರ್, ರಾಜ್ಯ ಮಾಹಿತಿ ಆಯುಕ್ತರು.
7. ಡಾ॥ ಸುಚೇತನ ಸ್ವರೂಪ್, ರಾಜ್ಯ ಮಾಹಿತಿ ಆಯುಕ್ತರು.
8. ಶ್ರೀ. ವೃಷಭೇಂದ್ರ ಮೂರ್ತಿ, ಕಾರ್ಯದರ್ಶಿ.
9. ಶ್ರೀಮತಿ ಶ್ರೀಲತಾ ಕೋಟೇಮಠ್, ಅಧೀನ ಕಾರ್ಯದರ್ಶಿ.

ಈ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:-

**ಮಾನ್ಯ ಮುಖ್ಯ ಮಾಹಿತಿ ಆಯುಕ್ತರು ಸಭೆಗೆ ಎಲ್ಲಾ ಆಯುಕ್ತರನ್ನು ಸ್ವಾಗತಿಸುತ್ತಾ, ಇನ್ನು ಮುಂದೆ ಎಂದಿನಂತೆ ಪ್ರತಿ ಗುರುವಾರದಂದು ಸಂಜೆ 4:30ಕ್ಕೆ ಆಯುಕ್ತರುಗಳ ಸಭೆಯನ್ನು ನಡೆಸುವುದಾಗಿ ತಿಳಿಸಿದರು.**

1. ರಾಜ್ಯ ಉಚ್ಚ ನ್ಯಾಯಾಲಯದ W.P ನಂ. 40901/2011 ಆದೇಶ ದಿ: 17-03-2015ರ ಕುರಿತು.

ರಾಜ್ಯದ ಅಡ್ವೋಕೇಟ್ ಜನರಲ್‌ರವರು ನೀಡಿರುವ ಕಾನೂನು ಅಭಿಪ್ರಾಯ ಕುರಿತು ಸಭೆ ಕೂಲಂಕುಷವಾಗಿ ಚರ್ಚಿಸಿ, ಯಾವುದೇ ಮೇಲ್ಮನವಿಯನ್ನು ಸಲ್ಲಿಸದೇ ಇರಲು ತೀರ್ಮಾನಿಸಿ, ಈ ಬಗ್ಗೆ ಆಯೋಗದಿಂದ ನೀಡುವ ಕರ್ನಾಟಕ ಮಾಹಿತಿ ಹಕ್ಕು ಕಾಯ್ದೆ-2005ರ ಕಲಂ 18(1)ರಡಿ ದೂರು ಸಲ್ಲಿಸುವ ಮುನ್ನ, ಕಲಂ 19(1)ರಡಿ ಪ್ರಥಮ ಮೇಲ್ಮನವಿಗೆ ಹೋಗಿಬರಬೇಕೆಂದು ಮಾನ್ಯ ಉಚ್ಚ ನ್ಯಾಯಾಯಲದಲ್ಲಿ ತೀರ್ಮಾನಿಸಿದ ಪ್ರಕರಣದಲ್ಲಿನ ಸನ್ನಿವೇಶಗಳು ಇರುವಂತಹ ಪ್ರಕರಣಗಳಲ್ಲಿ, ಆ ಆದೇಶದ ಅನ್ವಯ ತೀರ್ಮಾನ ಕೈಗೊಂಡು ಅರ್ಜಿದಾರರಿಗೆ ಸೂಕ್ತವಾಗಿ ತಿಳಿಸಬಹುದಾಗಿದ್ದು, ಈ ಬಗ್ಗೆ ಕಲಂ 18(1)ರ ಆಯೋಗದ ಚೆಕ್‌ಲಿಸ್ಟ್‌ನಲ್ಲಿ ಅವಶ್ಯಕ ತಿದ್ದುಪಡಿ ಮಾಡಿಕೊಳ್ಳಲು ಕ್ರಮ ಕೈಗೊಳ್ಳುವಂತೆ ಆಯೋಗವು ಮಾನ್ಯ ಕಾರ್ಯದರ್ಶಿಯವರಿಗೆ ಸೂಚಿಸಿತು.

ಕ್ರಮ: ಕಾರ್ಯದರ್ಶಿ

2. ಸಿಆಸುಇ/49/ಕತವ/2013, ದಿ: 16-05-2015ರ ಪತ್ರ ಕುರಿತು.

ಈ ಕುರಿತು ಈಗಾಗಲೇ ಕಳೆದ ಸಭೆಯಲ್ಲಿಯೂ ಸಹ ಚರ್ಚಿಸಿದ್ದು, ಸಿಆಸುಇ(ಜನಸ್ಪಂದನ) ಇವರಿಗೆ ಕರ್ನಾಟಕ ಮಾಹಿತಿ ಆಯೋಗಕ್ಕೆ 2ನೇ ಮೇಲ್ಮನವಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಪ್ರತಿದಿನ ಇವುಗಳನ್ನು ವಿಲೇ ಮಾಡಲು ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂಬ ಅಂಶವನ್ನು ಪತ್ರ ಮುಖೇನ ತಿಳಿಸುವಂತೆ ಕಾರ್ಯದರ್ಶಿಯವರಿಗೆ ಸಭೆ ಸೂಚಿಸಿತು.

ಕ್ರಮ: ಕಾರ್ಯದರ್ಶಿ

3. ಜಿಆರ್ಆರ್ ನಂ. 49201/2015, ದಿ: 01-12-2015ರ ಪತ್ರ ಕುರಿತು.

ಮೇಲ್ಕಂಡ ಜಿಆರ್ಆರ್ ಸಂಖ್ಯೆಯ ಪತ್ರವು ಕರ್ನಾಟಕ ಮಾಹಿತಿ ಆಯೋಗದ ಕಾರ್ಯದರ್ಶಿಗಳ ವಿರುದ್ಧ ಮಾನ್ಯ ಲೋಕಾಯುಕ್ತರವರಿಗೆ ಸಲ್ಲಿಸಿದ್ದ ದೂರಿನ ಬಗ್ಗೆ ಇದ್ದು, ಈ ಸಂಬಂಧ ವರದಿಯನ್ನು ಈಗಾಗಲೇ ಮಾನ್ಯ ಲೋಕಾಯುಕ್ತರವರಿಗೆ ನೀಡಿರುವುದರಿಂದ ಈ ಅಂಶವನ್ನು ಕಾರ್ಯಸೂಚಿಯಿಂದ ಕೈ ಬಿಡುವಂತೆ ಸಭೆ ಸೂಚಿಸಿತು.

4. ಕ್ರಿಯಾ ಕಟ್ಟೆ, ಇವರ ದಿ: 19-04-2016ರ ಪತ್ರ ಕುರಿತು.

ಈ ಬಗ್ಗೆ ಸಭೆ ಕೂಲಂಕುಷವಾಗಿ ಚರ್ಚಿಸಿದ್ದು, ಪ್ರಕರಣಗಳ ಆಯಾಯ ನ್ಯಾಯಾಲಯ ಸಭಾಂಗಣಗಳಿಗೆ ಹಂಚಿಕೆಯಾದ ನಂತರ ಅರ್ಜಿದಾರರು ಹಿರಿಯ ನಾಗರೀಕರೆಂದು ಅಥವಾ ಪ್ರಕರಣಗಳನ್ನು ಅವಧಿಗೆ ಮುಂಚೆ ತೆಗೆದುಕೊಳ್ಳುವಂತೆ ಕೋರಿ ಬರೆದಿರುವ ಪತ್ರಗಳನ್ನು, ಪ್ರಕರಣಗಳ ವರ್ಗಾವಣೆಗೆ ಕೋರಿ ಬರೆದಿರುವ ಪತ್ರಗಳನ್ನು ಹಾಗೂ ಪುನರ್ ಆರಂಭಿಸಲು ಕೋರಿ ಬರೆದಿರುವ ಪತ್ರಗಳನ್ನು ಆಯಾಯ ನ್ಯಾಯಾಲಯ ಸಭಾಂಗಣದ ಮಾನ್ಯ ಆಯುಕ್ತರ ಗಮನಕ್ಕೆ ತರಲು ಕಾರ್ಯದರ್ಶಿಯವರಿಗೆ ಸೂಚಿಸುತ್ತಾ, ಈ ಬಗ್ಗೆ ಆಯಾಯ ನ್ಯಾಯಾಲಯ ಸಭಾಂಗಣದ ಆಯುಕ್ತರುಗಳೇ ನೀಡಬಹುದೆಂದು ನಿರ್ಣಯಿಸಲಾಯಿತು.

ಕ್ರಮ: ಕಾರ್ಯದರ್ಶಿ ಹಾಗೂ ಆಯಾಯ ನ್ಯಾಯಾಲಯ
ಸಭಾಂಗಣಗಳ ಮಾನ್ಯ ಮಾಹಿತಿ ಆಯುಕ್ತರುಗಳ ಆಪ್ತ ಸಹಾಯಕರು.

5. ಡಿಪಿಎಆರ್ (ಜನಸ್ಪಂದನ), ಇವರ ಸಿಆಸುಇ/100/ಆರ್‌ಟಿಐ/2016, ದಿ: 19-05-2016ರ ಪತ್ರ ಕುರಿತು.

ಶ್ರೀ ಚಂದ್ರಶೇಖರ್ ಭಟ್‌ರವರು ನ್ಯಾಯಾಲಯ ಸಭಾಂಗಣ-02ರಲ್ಲಿ ವಿಚಾರಣೆಗೆ ಬಂದಿರುವ ಪ್ರಕರಣಗಳನ್ನು ಬೇರೆ ನ್ಯಾಯಾಲಯಕ್ಕೆ ವರ್ಗಾಯಿಸಲು ಕೋರಿದ್ದಾರೆ ಎಂದು ಕಾರ್ಯದರ್ಶಿಯವರು ರಾಜ್ಯಪಾಲರಿಗೆ ಬರೆದಿರುವ ಪತ್ರವನ್ನು ಓದಿ ಸಭೆಗೆ ಮಂಡಿಸಿದರು. ಒಂದು ನ್ಯಾಯಾಲಯದಿಂದ ಇನ್ನೊಂದು ನ್ಯಾಯಾಲಯಕ್ಕೆ ಪ್ರಕರಣವನ್ನು ವರ್ಗಾವಣೆ ಮಾಡಲು ಇಬ್ಬರೂ ರಾಜ್ಯ ಮಾಹಿತಿ ಆಯುಕ್ತರುಗಳು ಒಪ್ಪಿಗೆ ಸೂಚಿಸಬೇಕು. ಪ್ರಕರಣಗಳನ್ನು ಬೇರೆ ನ್ಯಾಯಾಲಯಕ್ಕೆ ವರ್ಗಾಯಿಸುವ ಪ್ರವೃತ್ತಿ ಬಿಡಬೇಕು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

1/6/16

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು